# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಬೆಳಗಾವಿ
# ಬೆಳಗಾವಿ

**ಅಧಿಸೂಚನೆ ಸಂಖ್ಯೆ: ಬೆಜಿನ್ಯಾ/ಆಡಳಿತ/ನೇಮಕಾತಿ/(ಬ್ಯಾಕ್‌ಲಾಗ್)1/2019, ದಿನಾಂಕ:30/01/2019**

**ವಿಷಯ:** ಶೀಘ್ರಲಿಪಿಗಾರರ, ಬೆರಳಚ್ಚುಗಾರರ, ಬೆರಳಚ್ಚು ನಕಲುಗಾರರ ಮತ್ತು ಸಿಪಾಯಿ ಹುದ್ದೆಗಳ ನೇಮಕಾತಿಯ ಬಗ್ಗೆ.

**ಉಲ್ಲೇಖ:**

1) ಗೌರವಾನ್ವಿತ ಉಚ್ಚ ನ್ಯಾಯಾಲಯದ ಅರೆ ಸರ್ಕಾರಿ ಪತ್ರ ಸಂಖ್ಯೆ: LCA-II 128/2012, ದಿನಾಂಕ 07/12/2018.
2) ಈ ಕಛೇರಿಯ ನೇಮಕಾತಿ ಅಧಿಸೂಚನೆಗಳಡಿಯಲ್ಲಿ ನೇಮಕಾತಿ ಆಗದೆ ಖಾಲಿ ಇದ್ದ ಹುದ್ದೆಗಳು.

*****

ಮೇಲ್ಕಂಡ ಅಧಿಸೂಚನೆಯನ್ವಯ, ಬೆಳಗಾವಿ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಉಲ್ಲೇಖ (1) ಮತ್ತು (2) ರಲ್ಲಿ ಬೆಳಗಾವಿ ಜಿಲ್ಲೆಗೆ ಮಂಜೂರಾದ ನ್ಯಾಯಾಲಯದಲ್ಲಿ ಭರ್ತಿ ಮಾಡದೆ ಇದ್ದಂತಹ ಖಾಲಿ ಇರುವ **ಶೀಘ್ರಲಿಪಿಗಾರರ, ಬೆರಳಚ್ಚುಗಾರರ, ಬೆರಳಚ್ಚು ನಕಲುಗಾರರ ಮತ್ತು ಸಿಪಾಯಿಗಳ ಹುದ್ದೆಗಳಿಗೆ** ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಜಾಗರೂಕತೆಯಿಂದ ಎಲ್ಲಾ ಅಂಕನಗಳನ್ನು ತಪ್ಪದೇ ಕೊನೆಯ ದಿನಾಂಕದೊಳಗೆ ಭರ್ತಿಮಾಡಿ ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ಬೆಳಗಾವಿಯ ಜಿಲ್ಲಾ ನ್ಯಾಯಾಲಯ ವೆಬ್‌ಸೈಟ್ https://districts.ecourts.gov.in/belagavi-onlinerecruitment ನಲ್ಲಿ ನೀಡಲಾದ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ದಿನಾಂಕ: 30-01-2019ರಿಂದ ದಿನಾಂಕ: 28-02-2019ರ ರಾತ್ರಿ 11.59ರವರೆಗೆ ಮಾತ್ರ ಸಲ್ಲಿಸತಕ್ಕದ್ದು ಮತ್ತು ಶುಲ್ಕವನ್ನು ಚಲನ್ ಮುಖಾಂತರ ಪಾವತಿಸಲು ದಿನಾಂಕ: 05-03-2019 ಕಡೆಯ ದಿನಾಂಕವಾಗಿದ್ದು ಅದರೊಳಗೆ ಎಸ್‌ಬಿಐ ಶಾಖೆಯ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು ಅಥವಾ ಆನ್‌ಲೈನ್ನ ಮೂಲಕ ಪಾವತಿಸತಕ್ಕದ್ದು.

**ಅಭ್ಯರ್ಥಿಗಳು ವಿಳಂಬ ಮಾಡದೆ ಆನ್‌ಲೈನ್ ಅರ್ಜಿಗಳನ್ನು ಕೊನೆ ದಿನಾಂಕದವರೆಗೆ ಕಾಯದೆ ಬೇಗನೆ ಸಲಿಸತಕ್ಕದ್ದು.**

**ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಏನಾದರೂ ತೊಂದರೆಗಳು ಬಂದರೆ ಈ ಕಛೇರಿಯ ಈ ಕಳಕಂಡ ಇಮೇಲ್ ಐಡಿಗೆ ಇಮೇಲನ್ನು ಕಳುಹಿಸುವುದು.**

recruitment.pdjbgm@gmail.com

...2.

## I ಶೀಘ್ರಲಿಪಿಗಾರರು (Stenographers)

i) ಹುದ್ದೆಗಳ ಸಂಖ್ಯೆ : 20 (ಇಪ್ಪತ್ತು)

ii) ವೇತನ ಶ್ರೇಣಿ: ರೂ. 27650-650-29600-750-32600-850-36000-950-39800-1100-46400-1250-52650 ಹಾಗೂ ವಿಶೇಷ ವೇತನ ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

| | ಇತರೆ | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಅಂಗ ವಿಕಲರು | ಒಟ್ಟು |
|---|---|---|---|---|---|
| ಸಾಮಾನ್ಯ | 1 | 3 | 2 | 1*** | 07 |
| ಪ್ರವರ್ಗ- IIA | -- | -- | 1 | 1*** | 02 |
| ಪ್ರವರ್ಗ- IIB | 1 | 1 | -- | 1* | 03 |
| ಪ್ರವರ್ಗ- IIIA | -- | 1 | 1 | 1 | 03 |
| ಪ್ರವರ್ಗ- IIIB | 1 | -- | -- | -- | 01 |
| ಪರಿಶಿಷ್ಟ ಜಾತಿ | -- | 1 | -- | 1** | 02 |
| ಪರಿಶಿಷ್ಟ ಪಂಗಡ | -- | 1 | 1 | -- | 02 |
| ಒಟ್ಟು | 03 | 07 | 05 | 05 | 20 |

* ಅಂಗವಿಕಲ ಅಭ್ಯರ್ಥಿಗಳಲ್ಲಿ ಒಂದು ಹುದ್ದೆ ಚಲನವಲನ ವೈಕಲ್ಯ ಹೊಂದಿದವರಿಗೆ (Locomotive Disorder)

** ಕುಷ್ಟರೋಗ ಮುಕ್ತರಾದವರಿಗೆ ( Leprosy Cured Persons) ಒಂದು ಹುದ್ದೆ.

*** ದೃಷ್ಟಿಮಾಂದ್ಯತೆಯುಳ್ಳವರಿಗೆ (Low vision)

**ಶೈಕ್ಷಣಿಕ ವಿದ್ಯಾರ್ಹತೆ:**

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

2) ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಭಾಷೆಯ ಶೀಘ್ರಲಿಪಿ ಸೀನಿಯರ್ ಮತ್ತು ಕನ್ನಡ ಹಾಗೂ ಆಂಗ್ಲ ಭಾಷೆಯ ಬೆರಳಚ್ಚು ಸೀನಿಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟರಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಡಿಪ್ಲೋಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಹಾಗೂ ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

**ಅರ್ಹತಾ ಪರೀಕ್ಷೆ:**

1) ಅಭ್ಯರ್ಥಿಗಳಿಗೆ ಕನ್ನಡ/ಇಂಗ್ಲೀಷ್ ಭಾಷೆಗಳಲ್ಲಿ ಒಂದು ನಿಮಿಷಕ್ಕೆ 120 ಶಬ್ದಗಳಂತೆ 5 ನಿಮಿಷಗಳ ಉಕ್ತಲೇಖನ ನೀಡಿ ನಂತರ 45 ನಿಮಿಷಗಳ ಅವಧಿಯಲ್ಲಿ ಬೆರಳಚ್ಚು ಯಂತ್ರದ ಮೇಲೆ ಲಿಪ್ಯಂತರ ಮಾಡಲು ಹೇಳಲಾಗುವುದು.

## II ಬೆರಳಚ್ಚುಗಾರರು (Typists)

i) ಹುದ್ದೆಗಳ ಸಂಖ್ಯೆ : 13 (ಹದಿಮೂರು)

ii) ವೇತನ ಶ್ರೇಣಿ: ರೂ. 21400-500-22400-550-24600-600-27000-650-29600-750-32600-850-36000-950-39800-1100-42000 ಹಾಗೂ ವಿಶೇಷ ವೇತನ ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

| | ಇತರೆ | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಮಾಜೀ ಸೈನಿಕರು | ಅಂಗ ವಿಕಲರು | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಒಟ್ಟು |
|---|---|---|---|---|---|---|---|---|
| ಸಾಮಾನ್ಯ | 1 | 1 | 2 | 1 | -- | 1 | 1 | 07 |
| ಪ್ರವರ್ಗ- IIA | 1 | -- | -- | -- | -- | -- | -- | 01 |
| ಪ್ರವರ್ಗ- IIB | 1 | -- | -- | -- | -- | -- | -- | 01 |
| ಪ್ರವರ್ಗ- IIIA | -- | 1 | -- | -- | -- | -- | -- | 01 |
| ಪ್ರವರ್ಗ- IIIB | -- | 1 | -- | -- | -- | -- | -- | 01 |
| ಪರಿಶಿಷ್ಟ ಜಾತಿ | -- | -- | 1 | -- | 1* | -- | -- | 02 |
| ಒಟ್ಟು | 03 | 03 | 03 | 01 | 01 | 01 | 01 | 13 |

* ದೃಷ್ಟಿಮಾಂದ್ಯತೆಯುಳ್ಳವರಿಗೆ (Low vision)

**ಶೈಕ್ಷಣಿಕ ವಿದ್ಯಾರ್ಹತೆ:**

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

2) ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಸೀನಿಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟರಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಡಿಪ್ಲೋಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

**ಅರ್ಹತಾ ಪರೀಕ್ಷೆ:**

1) ಅಭ್ಯರ್ಥಿಗೆ 15 ನಿಮಿಷಗಳ ಅವಧಿಯಂತೆ ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಬೆರಳಚ್ಚು ಮಾಡಲು ಉಕ್ತಲೇಖನ ನೀಡಲಾಗುವುದು.

...4.

## III ಬೆರಳಚ್ಚುನಕಲುಗಾರರು (Typist-Copyists)

iv) ಹುದ್ದೆಗಳ ಸಂಖ್ಯೆ : 15 (ಹದಿನೈದು)

v) ವೇತನ ಶ್ರೇಣಿ: ರೂ. 21400-500-22400-550-24600-600-27000-650-29600-750-32600-850-36000-950-39800-1100-42000 ಹಾಗೂ ವಿಶೇಷ ವೇತನ ನೀಡಲಾಗುವುದು.

vi) ಹುದ್ದೆಗಳ ವರ್ಗೀಕರಣ:

| | ಇತರೆ | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಮಾಜೀ ಸೈನಿಕರು | ಯೋಜನಾ ನಿರಾಶ್ರಿತ | ಒಟ್ಟು |
|---|---|---|---|---|---|---|
| ಸಾಮಾನ್ಯ | 1 | 2 | 3 | 1 | -- | 07 |
| ಪ್ರವರ್ಗ- I | -- | -- | -- | 1 | -- | 01 |
| ಪ್ರವರ್ಗ- IIA | -- | -- | 1 | -- | 1 | 02 |
| ಪ್ರವರ್ಗ- IIIA | 1 | -- | -- | -- | -- | 01 |
| ಪ್ರವರ್ಗ- IIIB | -- | -- | 1 | -- | -- | 01 |
| ಪರಿಶಿಷ್ಟ ಜಾತಿ | 1 | -- | -- | 1 | -- | 02 |
| ಪರಿಶಿಷ್ಟ ಪಂಗಡ | -- | 1 | -- | -- | -- | 01 |
| ಒಟ್ಟು | 03 | 03 | 05 | 03 | 01 | 15 |

**ಶೈಕ್ಷಣಿಕ ವಿದ್ಯಾರ್ಹತೆ:**

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

2) ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಜೂನಿಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟರಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಡಿಪ್ಲೋಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

**ಅರ್ಹತಾ ಪರೀಕ್ಷೆ:**

1) ಅಭ್ಯರ್ಥಿಗೆ 15 ನಿಮಿಷಗಳ ಅವಧಿಯಂತೆ ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಬೆರಳಚ್ಚು ಮಾಡಲು ಉಕ್ತಲೇಖನ ನೀಡಲಾಗುವುದು.

## IV ಸಿಪಾಯಿ (Peon)

i) ಹುದ್ದೆಗಳ ಸಂಖ್ಯೆ : 36 (ಮೂವತ್ತಾರು)

ii) ವೇತನ ಶ್ರೇಣಿ: ರೂ. 17000-400-18600-450-20400-500-22400-550-24600-600-27000-650-28950 ಹಾಗೂ ಇತರ ಭತ್ಯೆಗಳು ನೀಡಲಾಗುವುದು.

iii) ಹುದ್ದೆಗಳ ವರ್ಗೀಕರಣ:

| | ಇತರೆ | ಗ್ರಾಮೀಣ | ಮಹಿಳಾ ಅಭ್ಯರ್ಥಿ | ಮಾಜೀ ಸೈನಿಕರು | ಅಂಗ ವಿಕಲರು | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಒಟ್ಟು |
|---|---|---|---|---|---|---|---|---|
| ಸಾಮಾನ್ಯ | 3 | 5 | 5 | 2 | 1** | 1 | 1 | 18 |
| ಪ್ರವರ್ಗ- I | -- | -- | -- | -- | 1* | -- | -- | 01 |
| ಪ್ರವರ್ಗ- IIA | -- | 1 | 3 | -- | -- | 1 | -- | 05 |
| ಪ್ರವರ್ಗ- IIB | -- | -- | -- | -- | 1* | -- | -- | 01 |
| ಪ್ರವರ್ಗ- IIIA | -- | -- | 1 | -- | -- | -- | 1 | 02 |
| ಪ್ರವರ್ಗ- IIIB | -- | -- | 1 | -- | 1* | -- | -- | 02 |
| ಪರಿಶಿಷ್ಟ ಜಾತಿ | 1 | 2 | 2 | -- | -- | 1 | -- | 06 |
| ಪರಿಶಿಷ್ಟ ಪಂಗಡ | -- | 1 | -- | -- | -- | -- | -- | 01 |
| ಒಟ್ಟು | 04 | 09 | 12 | 02 | 04 | 03 | 02 | 36 |

* ದೃಷ್ಟಿಮಾಂದ್ಯತೆಯುಳ್ಳವರಿಗೆ (Low vision)

** ಶ್ರವಣ ದೋಷತೆಯುಳ್ಳವರಿಗೆ (Hearing Impaired)

**ಶೈಕ್ಷಣಿಕ ವಿದ್ಯಾರ್ಹತೆ:**

1) ಏಳನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

2) ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು.

**ವಿಶೇಷ ಸೂಚನೆ:** 1) 7ನೇ ತರಗತಿಯ ಅಂಕಗಳು ಶ್ರೇಣಿಯಲ್ಲಿದ್ದರೆ (ಗ್ರೇಡ್) ಅದನ್ನು ಅಂಕಗಳಾಗಿ ಪರಿವರ್ತಿಸಿ ಗರಿಷ್ಠ ಅಂಕಗಳು ಮತ್ತು ಪಡೆದ ಅಂಕಗಳ ಒಟ್ಟು ಶೇಕಡಾವಾರು ನಮೂದು ಇರುವ ಅಂಕಪಟ್ಟಿಯನ್ನು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರಬೇಕು ಹಾಗೂ ಅಂಕಪಟ್ಟಿಯಲ್ಲಿ ತ್ರೈಮಾಸಿಕ ಅಂಕಗಳಿದ್ದರೆ ಎಲ್ಲಾ ತ್ರೈಮಾಸಿಕ ಅಂಕಗಳನ್ನು ಕ್ರೋಢೀಕರಿಸಿದ ಅಂಕಪಟ್ಟಿಯ ಅಂಕಗಳನ್ನು ಆನ್‌ಲೈನ್ ಅರ್ಜಿ ನಮೂನೆಯಲ್ಲಿ ನಮೂದಿಸತಕ್ಕದ್ದು ಹಾಗೂ ಅಂಕಪಟ್ಟಿಯು ಕಡ್ಡಾಯವಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಯವರರಿಂದ ದೃಢೀಕರಿಸಲ್ಪಟ್ಟಿರತಕ್ಕದ್ದು ಮತ್ತು ಸದರಿ ಕ್ಷೇತ್ರ ಶಿಕ್ಷಣಾಧಿಕಾರಿಯವರರಿಂದ ದೃಢೀಕರಿಸಲ್ಪಟ್ಟ ಅಂಕಪಟ್ಟಿಯನ್ನು ಸಂದರ್ಶನದ ಸಮಯದಲ್ಲಿ ತಪ್ಪದೇ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2) ಮೇಲ್ಕಾಣಿಸಿದ 7ನೇ ತರಗತಿಯ ಅಂಕಪಟ್ಟಿಯು ಈ ಅಧಿಸೂಚನೆಯಲ್ಲಿ ನಮೂದಿಸಿದ ಅರ್ಜಿಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

...6.

3) ಮೇಲ್ಕಾಣಿಸಿದ 7ನೇ ತರಗತಿಯ ಅಂಕಗಳನ್ನೊಳಗೊಂಡ ಅಂಕಪಟ್ಟಿಯಾಗಿರಬೇಕು ಮತ್ತು ಬೇರೆ ರೀತಿಯಲ್ಲಿ ಅಂದರೆ ಗ್ರೇಡಗಳಲ್ಲಿ ಇದ್ದ ಅಂಕಪಟ್ಟಿಗಳನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಲು ಬರುವುದಿಲ್ಲ ಮತ್ತು ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

4) **7ನೇ ತರಗತಿಯ ಅಂಕಗಳನ್ನೊಳಗೊಂಡ ಅಂಕಪಟ್ಟಿಯು ಸಂಬಂಧಿತ ಮುಖ್ಯೋಪಾಧ್ಯಾಯರಿಂದ ಸಹಿ ಹಾಗೂ ಶಾಲೆಯ ಮೊಹರನ್ನು ಹಾಕಿಸಿಕೊಂಡಿರಬೇಕು ಮತ್ತು ಆ ಅಂಕಪಟ್ಟಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲುರುಜುವನ್ನು ಕಡ್ಡಾಯವಾಗಿ ಪಡೆದಿರಬೇಕು. ಹಾಗೇ ಇಲ್ಲದ ಪಕ್ಷದಲ್ಲಿ ಅಂತಹ ಆನ್‌ಲೈನ್ ಮೂಲಕ ಬಂದಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

**ನಿಗದಿತ ಅರ್ಜಿಶುಲ್ಕ :**

| ವಿವಿಧ ವರ್ಗಿಕರಣ | ಶೀಘ್ರಲಿಗಾರರ ಹುದ್ದೆಗೆ | ಬೆರಳಚ್ಚುಗಾರ ಹುದ್ದೆಗೆ | ಬೆರಳಚ್ಚುಗಾರ ನಕಲುಗಾರ ಹುದ್ದೆಗೆ | ಸಿಪಾಯಿ ಹುದ್ದೆಗೆ |
|---|---|---|---|---|
| ಸಾಮಾನ್ಯ ವರ್ಗ, ಪ್ರವರ್ಗ IIA, IIB, IIIA, IIIBಗೆ ಸೇರಿದ ಅಭ್ಯರ್ಥಿಗಳಿಗೆ. | ರೂ. 250/- ಅರ್ಜಿಶುಲ್ಕ ಪಾವತಿಸಬೇಕು. | ರೂ. 200/- ಅರ್ಜಿಶುಲ್ಕ ಪಾವತಿಸಬೇಕು. | ರೂ. 200/- ಅರ್ಜಿಶುಲ್ಕ ಪಾವತಿಸಬೇಕು. | ರೂ. 100/- ಅರ್ಜಿಶುಲ್ಕ ಪಾವತಿಸಬೇಕು. |
| ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-I ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ. | ಶುಲ್ಕ ವಿನಾಯಿತಿ ಇರುತ್ತದೆ. | ಶುಲ್ಕ ವಿನಾಯಿತಿ ಇರುತ್ತದೆ. | ಶುಲ್ಕ ವಿನಾಯಿತಿ ಇರುತ್ತದೆ. | ಶುಲ್ಕ ವಿನಾಯಿತಿ ಇರುತ್ತದೆ. |

**ಅರ್ಜಿಶುಲ್ಕ ಪಾವತಿಸಬೇಕಾದ ವಿಧಾನ:**

ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಈ ಕಳಕಂಡ ವಿಧಾನದ ಮುಖಾಂತರ ಮಾತ್ರ ಪಾವತಿ ಮಾಡತಕ್ಕದ್ದು:-

ಅ) ನ್ಯಾಯಾಲಯದ ವೆಬ್‌ಸೈಟ್ https://districts.ecourts.gov.in/belagavi or www.districts.ecourts.gov.in/belagavi/online-recruitment ರಲ್ಲಿ ನೀಡಲಾದ ಲಿಂಕ್ ಮುಖಾಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ State Bank Collect ಮೂಲಕ Online Payment through net banking/credit card/debit card/challan download ಸೌಲಭ್ಯದ ಮೂಲಕ Prl. District & Sessions Judge, Belagavi ರವರ ಹೆಸರಿಗೆ ಪಾವತಿಸತಕ್ಕದ್ದು.

ಅಥವಾ

ಆ) ಆನ್‌ಲೈನ್ನ ಮೂಲಕ ಮೇಲ್ಕಂಡ ವಿಧಾನದಲ್ಲಿ ಶುಲ್ಕವನ್ನು ಪಾವತಿ ಮಾಡಲಾಗದೇ ಇದ್ದಲ್ಲಿ ಅಭ್ಯರ್ಥಿಗಳು ಚಲನ್ ಪ್ರತಿಯನ್ನು ಅಧಿಕೃತ ವೆಬ್‌ಸೈಟ್ ಮಾಡಿಕೊಂಡು ಅದರ ಪ್ರಿಂಟ್‌ಔಟ್‌ನ್ನು ಪಡೆದುಕೊಂಡು ಕರ್ನಾಟಕ ರಾಜ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (SBIನ) ಯಾವುದೇ ಶಾಖೆಗೆ ಹಾಜರುಪಡಿಸಿ ಶುಲ್ಕವನ್ನು ಪಾವತಿಸತಕ್ಕದ್ದು.

ಈ ಮೇಲಿನ ವಿಧಾನಗಳನ್ನು ಹೊರತು ಪಡಿಸಿ ಯಾವುದೇ ಡಿಮಾಂಡ್ ಡ್ರಾಫ್ಟ್, ಪೋಸ್ಟಲ್ ಆರ್ಡರ್, ನಗದು, ಮನಿ ಆರ್ಡರ್ ಇವುಗಳ ರೂಪದಲ್ಲಿ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.

## ಎಲ್ಲ ಹುದ್ದೆಗಳಿಗಾಗಿ ಸಾಮಾನ್ಯ ನಿಯಮಗಳುಃ

1) ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕಾತಿ ನಿಯಮದಂತೆ ಎರಡು ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿಡಲಾಗುವುದು

2) ಕನಿಷ್ಠ ವಯೋಮಿತಿ ದಿನಾಂಕ 28.02.2019 ರಂದು 18 ವರ್ಷ ಆಗಿರಲೇಬೇಕು ಹಾಗೂ ಗರಿಷ್ಠ ವಯೋಮೀತಿ 28-02-2019 ರಂದು

    ಸಾಮಾನ್ಯ ವರ್ಗಃ 35 ವರ್ಷ,

    ಪ್ರವರ್ಗ IIA, IIB, IIIA, IIIB: 38 ವರ್ಷ,

    ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-I ಃ 40 ವರ್ಷ ಮಿಕ್ಕಿರಬಾರದು.

3) ಸರ್ಕಾರಿ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜೀ ಸೈನಿಕರಿಗೆ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು. ಈ ಬಗ್ಗೆ ಮೀಸಲಾತಿ ಕೋರಿದಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು.

4) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ/ವರ್ಗಾವಣೆ ಪ್ರಮಾಣಪತ್ರ/ಜನನ ದಿನಾಂಕ ತೋರಿಸುವ ದಾಖಲೆಯ ಉದ್ಧೃತ ಭಾಗದ ಪ್ರತಿ ಸಲ್ಲಿಸಬೇಕು.

5) ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ I,IIA,IIB,IIIA,IIIB ಗಳ ಮೀಸಲಾತಿ ಪ್ರಮಾಣ ಪತ್ರಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದಲ್ಲಿ) ಪ್ರತಿ ಸಲ್ಲಿಸಬೇಕು.

6) ಗ್ರಾಮೀಣ ಮೀಸಲಾತಿ ಪ್ರಮಾಣಪತ್ರ ನಿಗದಿತ ನಮೂನೆಯಲ್ಲಿ (ಮೀಸಲಾತಿ ಕೋರಿದಲ್ಲಿ) ಪ್ರತಿ ಸಲ್ಲಿಸಬೇಕು.

7) ಶಾಲಾ/ಕಾಲೇಜಿನ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರಿಂದ ಪಡೆದ ಒಂದು ನಡತೆ ಪ್ರಮಾಣಪತ್ರ ಹಾಗೂ ಸ್ಥಳೀಯ ಒಬ್ಬರು ಗಣ್ಯ ವ್ಯಕ್ತಿಯಿಂದ ಪಡೆದ 6 ತಿಂಗಳ ಇತ್ತೀಚಿನ ಒಂದು ನಡತೆ ಪ್ರಮಾಣಪತ್ರದ ಪ್ರತಿ ಸಲ್ಲಿಸಬೇಕು.

8) ಸೇವಾ ನಿರತ ಅಭ್ಯರ್ಥಿಗಳು ಅರ್ಜಿಗಳ ಸ್ವೀಕೃತಿಗಾಗಿ ನಿಗದಿಪಡಿಸಲಾದ ದಿನಾಂಕ ಹಾಗೂ ಸಮಯನ್ನು ಮೀರದಂತೆ ತಮ್ಮ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ನೀಡಲಾದ "ನಿರಾಕ್ಷೇಪಣಾ ಪ್ರಮಾಣಪತ್ರ" ವನ್ನು ಹೊಂದಿರತಕ್ಕದ್ದು.

9) ವಿವಿಧ ಮೀಸಲಾತಿ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಗಳು ನೀಡಿದ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು. ಗ್ರಾಮೀಣ ಪ್ರವರ್ಗದ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ಕೆನೆಪದರ ಪ್ರಮಾಣಪತ್ರವನ್ನು (Creamy Layer Certificate) ಸಲ್ಲಿಸತಕ್ಕದ್ದು.

10) ಮೇಲ್ಕಂಡ ಪ್ರಯೋಜನಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಸಕ್ಷಮ ಪ್ರಾಧಿಕಾರಿಗಳು ನೀಡಿದ ಸಂಬಂಧಪಟ್ಟ ಪ್ರಮಾಣಪತ್ರಗಳನ್ನು ಹೊಂದಿರತಕ್ಕದ್ದು.

11) ವಿಕಲಚೇತನರು/ ಮಾಜಿ ಸೈನಿಕರು/ ವಿಧವೆಯರು ಸಕ್ಷಮ ಪ್ರಾಧಿಕಾರಗಳು ನೀಡಿದ ಪ್ರಮಾಣಪತ್ರಗಳನ್ನು ಹೊಂದಿರತಕ್ಕದ್ದು.

...8.

12) ಮೌಖಿಕ ಪರೀಕ್ಷೆಯ ಸಮಯದಲ್ಲಿ ದಾಖಲೆಗಳ ಪರಿಶೀಲನೆಗಾಗಿ ಕರೆಯಲ್ಪಡುವ ಅಭ್ಯರ್ಥಿಗಳು, ಶೈಕ್ಷಣಿಕ ವಿದ್ಯಾರ್ಹತೆ (ಜನ್ಮ ದಿನಾಂಕವನ್ನು ತೋರಿಸಲು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ, ಬೆರಳಚ್ಚು ಪರೀಕ್ಷೆಗಳಪ್ರಮಾಣ ಪತ್ರಗಳು, ಜಾತಿ ಪ್ರಮಾಣ ಪತ್ರ, ಇವುಗಳಿಗೆ ಸಂಬಂಧಿಸಿದಂತೆ ಅಗತ್ಯ ಮೂಲದಾಖಲೆಗಳನ್ನು ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ಪರಿಶೀಲನೆ ಮಾಡುವಾಗ ಅರ್ಜಿದಾರರು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ, ಆಗ ಅವರ ಅಭ್ಯರ್ಥಿಕೆಯು ತಿರಸ್ಕೃತವಾಗುತ್ತದೆ ಹಾಗೂ ಅವರು ಸುಳ್ಳು ಮಾಹಿತಿ ನೀಡಿದ್ದಕ್ಕಾಗಿ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೂ ಸಹಾ ಗುರಿಯಾಗಬೇಕಾಗುತ್ತದೆ.

13) ಅಭ್ಯರ್ಥಿಯು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವುದು ಕಂಡುಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

14) ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ಸೇವಾ ನಿಯಮ (ಪರಿವೀಕ್ಷಣೆ ನಿಯಮಗಳು) 1977ರ ಪ್ರಕಾರ ಎರಡು ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿರುತ್ತಾರೆ. ಈ ಅವಧಿಯಲ್ಲಿ ಅಭ್ಯರ್ಥಿಗಳು ಹುದ್ದೆಗೆ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಮತ್ತು ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು.

15) ಶೀಘ್ರಲಿಪಿಗಾರರ, ಬೆರಳಚ್ಚುಗಾರರ ಹಾಗೂ ಬೆರಳಚ್ಚು ನಕಲುಗಾರರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಆಯ್ಕೆಯಾದ ಮೂರು ತಿಂಗಳ ಒಳಗೆ ಸರ್ಕಾರವು ಅನುಮೋದಿಸಿದ ಏಜೆನ್ಸಿಯಲ್ಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಶೇಕಡಾ 60 ಅಂಕಗಳಿಗೆ ಕಡಿಮೆ ಇಲ್ಲದಂತೆ ಪಡೆದು ಪಾಸು ಮಾಡತಕ್ಕದ್ದು.

**ಅಭ್ಯರ್ಥಿಗಳು ಆನ್‌ಲೈನ್ (On-line) ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು:**

1) ಅಭ್ಯರ್ಥಿಯು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಮೊದಲು ಕೊಟ್ಟಿರುವ ಎಲ್ಲಾ ಸೂಚನೆಗಳನ್ನು ಗಮನವಿಟ್ಟು ಓದಿಕೊಳ್ಳಬೇಕು ಮತ್ತು ತಪ್ಪಾಗದಂತೆ ನೋಡಿಕೊಳ್ಳುವುದು. ಸರಿಯಾದ ಮಾಹಿತಿನೀಡದೇ ಇರುವ ಮತ್ತು ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2) ಅಭ್ಯರ್ಥಿಗಳು ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಇ-ಮೇಲ್ ಐಡಿಯನ್ನು ಹೊಂದಿದ್ದಲ್ಲಿ ನಮೂದಿಸುವುದು. ಒಂದು ವೇಳೆ ಎಸ್‌ಎಂಎಸ್ ಅಥವಾ ಇ-ಮೇಲ್ ಮುಖಾಂತರ ಅಭ್ಯರ್ಥಿಗಳಿಗೆ ಸಂದೇಶ ತಲುಪದಿದ್ದಲ್ಲಿ ಈ ಪ್ರಾಧಿಕಾರವು ಹೊಣೆಯಾಗುವುದಿಲ್ಲ.

3) ಅಭ್ಯರ್ಥಿಯು ಭಾವಚಿತ್ರ ಮತ್ತು ಸಹಿಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲು ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸತಕ್ಕದ್ದು:

   ಅ) ಬಣ್ಣದ ಭಾವಚಿತ್ರವು ಇತ್ತೀಚಿನದ್ದಾಗಿದ್ದು ಅಳತೆಯಲ್ಲಿ 5 cm ಉದ್ದ X 3.6 cm ಅಗಲವುಳ್ಳದ್ದಾಗಿರಬೇಕು ಮತ್ತು 50 kb ಅಳತೆಯದ್ದಾಗಿರಬೇಕು ಹಾಗೂ ಅದು .jpg ನಮೂನೆಯಲ್ಲಿರಬೇಕು. ಭಾವಚಿತ್ರದ ಹಿಂಬದಿಯು ಬಿಳಿ ಬಣ್ಣದ್ದಾಗಿರಬೇಕು.

   ಆ) ಭಾವಚಿತ್ರವನ್ನು ಸ್ಕ್ಯಾನ್ ಮಾಡಿ ಅರ್ಜಿಗೆ ಅಪ್‌ಲೋಡ್ ಮಾಡಬೇಕು (ಯಾವುದೇ ಕಾರಣಕ್ಕೂ ಭಾವಚಿತ್ರದ ಮೇಲೆ ಸಹಿ ಮಾಡಬಾರದು)

   ಇ) ಅಭ್ಯರ್ಥಿಯು ಕಪ್ಪು ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿ (2.5 cm ಉದ್ದ X 7.5 cm ಅಗಲವುಳ್ಳದ್ದಾಗಿರಬೇಕು ಮತ್ತು 26 kb ಅಳತೆಯದ್ದಾಗಿರಬೇಕು ಹಾಗೂ ಅದು .jpg ನಮೂನೆಯಲ್ಲಿರಬೇಕು) ಅಪಲೋಡ್ ಮಾಡಬೇಕು.

...9.

4) ತದನಂತರ ಅಭ್ಯರ್ಥಿಯು On-line ಅರ್ಜಿಯಲ್ಲಿ ಕೋರಲಾದ ಎಲ್ಲಾ ಮಾಹಿತಿಗಳನ್ನೂ ಭರ್ತಿ ಮಾಡಿ ನಿಗದಿತ ಶುಲ್ಕ ಪಾವತಿಸಲು ಅರ್ಜಿಯಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು. ತದನಂತರ ಅರ್ಜಿಯನ್ನು ಹಾಗೂ ಶುಲ್ಕವನ್ನು ತುಂಬಿದ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ತಮ್ಮ ಹತ್ತಿರ ಕಾಯ್ದಿರಿಸಿಕೊಳ್ಳತಕ್ಕದ್ದು ಹಾಗೂ ಅರ್ಹತಾ ಪರೀಕ್ಷೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

5) **ಅಭ್ಯರ್ಥಿಗಳು On-line ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.**

6) ನ್ಯಾಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಆನ್‌ಲೈನ್ ಮೂಲಕ ನೊಂದಾಯಿಸಲು ದಿನಾಂಕಃ 28-02-2019ರ ರಾತ್ರಿ 11.59ರವರೆಗೆ ಅವಕಾಶವಿರುತ್ತದೆ.

ಮತ್ತು

ಶುಲ್ಕವನ್ನು ಚಲನ್ ಮುಖಾಂತರ ಪಾವತಿಸಲು ದಿನಾಂಕಃ 05-03-2019 ಕಡೆಯ ದಿನಾಂಕವಾಗಿದ್ದು ಅದರೊಳಗೆ ಎಸ್‌ಬಿಐ ಶಾಖೆಯ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು.

7) ಅರ್ಹ ಅಭ್ಯರ್ಥಿಗಳಿಗೆ SMS ಮತ್ತು E-mail ಮುಖಾಂತರ ಮಾಹಿತಿ ನೀಡಲಾಗುವುದು. ಪ್ರಾಯೋಗಿಕ ಪರೀಕ್ಷೆ/ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ನ್ಯಾಯಾಲಯದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಸದರಿ ಪಟ್ಟಿಯ ಆಧಾರದ ಮೇಲೆ ಅಭ್ಯರ್ಥಿಗಳನ್ನು ಪ್ರಾಯೋಗಿಕ ಪರೀಕ್ಷೆ/ಸಂದರ್ಶನಕ್ಕೆ ಕರೆಯಲಾಗುವುದು.

8) **ಆನ್‌ಲೈನ್ ಹೊರತುಪಡಿಸಿ ಇತರೆ ಯಾವುದೇ ವಿಧಾನದಲ್ಲಿ ಕಳುಹಿಸಿದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.**

9) ಸೇವಾ ನಿರತ ಅಭ್ಯರ್ಥಿಗಳು ಅರ್ಜಿಗಳ ಸ್ವೀಕೃತಿಗಾಗಿ ನಿಗದಿಪಡಿಸಲಾದ ದಿನಾಂಕ ಹಾಗೂ ಸಮಯವನ್ನು ಮೀರದಂತೆ ಆನ್‌ಲೈನ್‌ನಲ್ಲಿ ತಮ್ಮ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ನೀಡಲಾದ "ನಿರಾಕ್ಷೇಪಣಾ ಪ್ರಮಾಣಪತ್ರ" ವನ್ನು ಹೊಂದಿರತಕ್ಕದ್ದು.

ಇತರೆ ಸೂಚನೆಗಳುಃ

1) **ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ನಿಗದಿತ ನಮೂನೆಯಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಪ್ರತ್ಯೇಕ ಅರ್ಜಿಗೆ ಶುಲ್ಕವನ್ನು ಚಲನ ಮುಖಾಂತರ ಪಾವತಿಸತಕ್ಕದ್ದು ಹಾಗೂ ಚಲನ ಮುಖಾಂತರ ಸಲ್ಲಿಸಿದ ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.**

2) **ಶೀಘ್ರಲಿಪಿಗಾರರ/ಬೆರಳಚ್ಚುಗಾರರ/ಬೆರಳಚ್ಚು ನಕಲುಗಾರರ ಹುದ್ದೆಗೆ ನಡೆಸುವ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣಹೊಂದಿದ ಅಭ್ಯರ್ಥಿಗಳ ಹಾಗೂ ಅವರ ನಿಗದಿ ಪಡಿಸಿದ ಶೈಕ್ಷಣಿಕ ಪರೀಕ್ಷೆಗಳ ಅಂಕಗಳ ಒಟ್ಟು ಸರಾಸರಿ ಆಧಾರದ ಮೇಲೆ ಮೆರಿಟ್‌ವೈಸ್ (Meritwise) 1:5ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನ ಪತ್ರ ಬರದೇ ಇರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಾಗಿಲ್ಲವೆಂದು ಭಾವಿಸತಕ್ಕದ್ದು.**

...10.

3) ಸಿಪಾಯಿ ಹುದ್ದೆಗೆ 1 : 10 ರ ಅನುಪಾತದಲ್ಲಿ ನಿಗದಿ ಪಡಿಸಿದ ಶೈಕ್ಷಣಿಕ ಪರೀಕ್ಷೆಗಳ ಅಂಕಗಳ ಒಟ್ಟು ಸರಾಸರಿ ಆಧಾರದ ಮೇಲೆ ಮೆರಿಟ್ ವೈಸ್ (Merit wise) ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನ ಪತ್ರ ಬರದೇ ಇರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಾಗಿಲ್ಲವೆಂದು ಭಾವಿಸತಕ್ಕದ್ದು.

4) ಆಯ್ಕೆಯ ಸಂಬಂಧವಾಗಿ ಸಂದರ್ಶನಕ್ಕೆ ಅನರ್ಹರಾದ ಅಭ್ಯರ್ಥಿಗಳು ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರವಾಗಲಿ, ಖುದ್ದಾಗಿ ಬರುವುದಾಗಲಿ ಅಥವಾ ದೂರವಾಣಿ ಕರೆಗಳನ್ನು ನಡೆಸಲು/ಮಾಡಲು ಅವಕಾಶವಿರುವುದಿಲ್ಲ.

5) ಅಂಗವಿಕಲ ಹುದ್ದೆಗಳಿಗೆ ನಿರ್ದಿಷ್ಟಪಡಿಸಿದ ಅಂಗವಿಕಲ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಬೇರೆ ಅಂಗವಿಕಲತೆ ಇರುವವರನ್ನು ಆಯ್ಕೆಗೆ ಪರಿಗಣಿಸಲಾಗುವುದು.

6) ಮಾಹಿತಿಯನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡು ಆನ್‌ಲೈನ್ ಅರ್ಜಿಯಲ್ಲಿಯ ಎಲ್ಲ ಕಾಲಂಗಳನ್ನು ನಿಗದಿತ ಉತ್ತರಗಳಿಂದ ಭರ್ತಿ ಮಾಡಿ, ಅಭ್ಯರ್ಥಿಯ ಭಾವಚಿತ್ರ ಹಾಗೂ ಸಹಿಯೊಂದಿಗೆ ಅಪಲೋಡ ಮಾಡತಕ್ಕದ್ದು. ಸರಿಯಾಗಿ ಕಾಲಂಗಳನ್ನು (ಅಂಕಣಗಳನ್ನು) ಭರ್ತಿ ಮಾಡದೇ, ಅಭ್ಯರ್ಥಿಯ ಭಾವಚಿತ್ರ ಹಾಗೂ ಸಹಿ ಇರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

7) ಈ ಅಧಿಸೂಚನೆಯ ಎಲ್ಲಾ ಪ್ರಕ್ರಿಯೆಗಳನ್ನು ಕಾಲ-ಕಾಲಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿಯ ಅಧಿಕೃತ ವೆಬ್‌ಸೈಟ ಮತ್ತು ಸೂಚನಾ ಫಲಕದ (Notice Board) ಮೇಲೆ ಪ್ರಕಟಿಸಲಾಗುವುದು.

(ಆರ್. ಜೆ. ಸತೀಶ ಸಿಂಗ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ.

ಪ್ರತಿಯನ್ನು ವಿಲೇಖಾನಾಧಿಕಾರಿಗಳು ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು ಇವರಿಗೆ ಪ್ರತ್ಯೇಕ ಪತ್ರದೊಂದಿಗೆ ಸಲ್ಲಿಸಲಾಗಿದೆ .

ಪ್ರತಿಯನ್ನು:

540/19
31.1.2019

1) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ______________________
(ತಮ್ಮ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕ್ರಮ ಕೈಕೊಳ್ಳುವಂತೆ ಹಾಗೂ ತಮ್ಮ ಅಧೀನ ನ್ಯಾಯಾಲಯಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ಕಳುಹಿಸುವಂತೆ ಕೋರಿದೆ.)
2) ಉಪನಿರ್ದೇಶಕರು, ಜಿಲ್ಲಾ ಮತ್ತು ವಾರ್ತಾ ಇಲಾಖೆ, ಬೆಳಗಾವಿ ಇವರಿಗೆ ಪತ್ರಿಕಾ ಪ್ರಕಟಣೆಗಾಗಿ.
3) ಕರ್ನಾಟಕ ರಾಜ್ಯ ಗೆಜಿಟ್ ಪ್ರಕಟಣೆಗಾಗಿ.
4) ಬೆಳಗಾವಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ನ್ಯಾಯಾಲಯಗಳ ಪೀಠಾಸೀನಾಧಿಕಾರಿಗಳಿಗೆ (ಸೂಚನಾ ಫಲಕದಲ್ಲಿ ಪ್ರಕಟಿಸಲು).
5) ಈ ನ್ಯಾಯಾಲಯದ ಸೂಚನಾ ಫಲಕಕ್ಕೆ.

ನ್ಯಾಯಾಲಯದ ಆದೇಶದ ಮೇರೆಗೆ

ಮುಖ್ಯ ಆಡಳಿತಾಧಿಕಾರಿಗಳು
ಜಿಲ್ಲಾ ನ್ಯಾಯಾಲಯ, ಬೆಳಗಾವಿ.